ಶ್ರೀ ಎಸ್ ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಮಾಡಿಕೊಡುತ್ತದೆಂದು ಹೇಳಿದರೆ ಸಾಕು.

ಉಪಾಧ್ಯಕ್ಷರು : ಅವರು ಮಾಡಿಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ಅವರು ಪರಿಶೀಲನೆ ಮಾಡುತ್ತೇವೆಂದು ಮಾತ್ರ ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಅದು ಎರಡೂ ಒಂದೇ ಆನ್ಸರ್.

ದೇವದುರ್ಗವನ್ನು ಪ್ರವಾಸ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸುವುದು.

188 - ಶ್ರೀಮತಿ ಬಿ.ಟಿ. ಲಲಿತಾನಾಯಕ (ದೇವದುರ್ಗ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಎಷ್ಟು ತಾಣಗಳನ್ನು ಪ್ರವಾಸಿ ಕೇಂದ್ರಗಳಾಗಿ ಮಾಡಲಾಗಿದೆ?

ಆ) ದೇವದುರ್ಗದಲ್ಲಿ ಇತಿಹಾಸ ಪ್ರಸಿದ್ಧವಾದ ಮುಕ್ತಾಯಕ್ಕನ ಬೆಟ್ಟ,,ಪ್ರಭುದೇವರ ಗುಹೆ, ಅಣಿಮಲ್ಲೇಶ್ವರ ಸ್ಥಳಗಳಿದ್ದು ಇವುಗಳನ್ನು ಪ್ರವಾಸಿ ಕೇಂದ್ರಗಳಾಗಿ ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀಮತಿ. ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಒಟ್ಟು 257 ಸ್ಥಳಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಗೆ ಖಾತ್ರಿಯಾದ ಸ್ಥಳಗಳೆಂದು ವಿಶೇಷವಾಗಿ 'ಸಿ' ಗುಂಪಿನಲ್ಲಿ ಗುರುತಿಸಲಾಗಿದೆ.

ಆ) ದೇವದುರ್ಗದಲ್ಲಿ ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 'ಬಿ' ಗುಂಪಿನಲ್ಲಿ ಗುರುತಿ ಸಲಾಗಿದೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 257 ಸ್ಥಳಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಗೆ ಖಾತ್ರಿಯಾದ ಸ್ಥಳಗಳೆಂದು ನಿಗದಿ ಪಡಿಸಿದ್ದೇವೆಂದು ಹೇಳಿದ್ದಾರೆ. ಹಾಗಾಗಿ ಅದನ್ನು 'ಸಿ' ಗುಂಪಿಗೆ ಸೇರಿದ್ದೇವೆಂದು ಹೇಳಿದ್ದಾರೆ. ದೇವದುರ್ಗವನ್ನು 'ಬಿ' ಗುಂಪಿಗೆ ಸೇರಿಸಿದ್ದೇವೆಂದು ಹೇಳಿದ್ದಾರೆ. ನಾನು ಏನು ಅಂದುಕೊಂಡಿದ್ದೇನೆ ಎಂದರೆ ಇಂಗ್ಲೀಷ್‌ನಲ್ಲಿ 'ಬಿ' ಆದಮೇಲೆ 'ಸಿ' ಅಂದರೆ 'ಸಿ'ಗೆ ಖಾತ್ರಿ ಪಡಿಸುವುದಾದರೆ 'ಬಿ'ಏಕೆ ಬಿಟ್ಟಿರಿ. 'ಬಿ' ಎಂದರೆ ಏನು? 'ಸಿ' ಎಂದರೆ ಏನು? ದೇವದುರ್ಗ ಏಕೆ 'ಬಿ' ಗುಂಪಿಗೆ ಬಂತು? ದಯವಿಟ್ಟು ಇದನ್ನು ಹೇಳಿ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 'ಎ' ಎಂದು ಇದ್ದರೆ ಮೊದಲು,

ಅಥವಾ ಮೇಲೆ, 'ಬಿ' ಎಂದರೆ ಕೆಳಗಡೆ, 'ಸಿ' ಎಂದರೆ ಇನ್ನೂ ಕೆಳಗಡೆ ಎಂದು ಅರ್ಥವಲ್ಲ. ಬೆಂಗಳೂರು ಕಾರ್ಪೊರೇಷನ್ ಬಿಟ್ಟು ಬಾಕಿ ಇರತಕ್ಕಂಥ ಕಾರ್ಪೊರೇಷನ್ ಒಳಗಡೆ ಇರತಕ್ಕಂಥ ಪ್ರವಾಸಿ ಕೇಂದ್ರವನ್ನು 'ಎ' ಕ್ಯಾಟಿಗರಿ ಎಂದು ಮಾಡಿದ್ದಾರೆ 'ಸಿ' ಎಂದರೆ - ಆ ನಮ್ಮ ಜಿಲ್ಲೆಗಳಲ್ಲಿ ಪ್ರವಾಸಿಕೇಂದ್ರಗಳು ಯಾವುದು ಇದೆ, ಎಲ್ಲಾ ಜಿಲ್ಲೆಗಳಲ್ಲಿರತಕ್ಕಂಥ ಪ್ರವಾಸಿ ಕೇಂದ್ರಗಳನ್ನು ನೋಡಿ ಅಲ್ಲಿರತಕ್ಕಂಥದ್ದನ್ನು 'ಸಿ' ಕೇಂದ್ರವೆಂದು ಮಾಡಿದ್ದಾರೆ. ಈ ಜಿಲ್ಲೆಯಲ್ಲಿ ಒಳಗಡೆ ಇರತಕ್ಕಂಥದ್ದಲ್ಲಿಯೂ ಬಿಟ್ಟು ಕಾರ್ಪೊರೇಷನ್ಸ್ ಒಳಗಡೆ ಇರತಕ್ಕಂಥದ್ದು ಅದೂ ಇಲ್ಲದೆ ಇರತಕ್ಕಂಥ ಕೆಲವು ಪ್ರವಾಸಿ ಕೇಂದ್ರಗಳು ಯಾವುದು ಇದೆ, ಆ ಪ್ರವಾಸಿಕೇಂದ್ರಗಳು ಈ 'ಬಿ' ಕೆಟಗರಿಯಲ್ಲಿ ಬರುತ್ತದೆ. ಆದ್ದರಿಂದ ನಿಮ್ಮದೇವದುರ್ಗ ಕ್ಷೇತ್ರವು 'ಬಿ' ಕೆಟಗರಿಯಲ್ಲಿ ಬರುತ್ತದೆ. ಇನ್ನು 'ಬಿ' ಕೆಟಗರಿಯಲ್ಲಿರತಕ್ಕಂಥ ಪ್ರವಾಸಿ ಕೇಂದ್ರಗಳಲ್ಲಿ ಯಾರಾದರೂ ಖಾಸಗಿ ವ್ಯಕ್ತಿಗಳು ಬಂದು ಸ್ವಲ್ಪಮಟ್ಟಿಗೆ ಅಲ್ಲಿ ಹೋಟೆಲುಗಳನ್ನು ತೆರೆಯುತ್ತಿರತಕ್ಕಂಥದ್ದು, ಮತ್ತು ಅಲ್ಲಿರತಕ್ಕಂಥ ಯಾವುದಾದರೂ ಮನೋರಂಜನೆ ಕಾರ್ಯಕ್ರಮವನ್ನು ಮಾಡಲಿಕ್ಕೆ ಇರತ್ಕಕಂಥದ್ದಕ್ಕೆ ಏನಾದರೂ ಕಾರ್ಯಕ್ರಮವನ್ನು ತೆಗೆಯುತ್ತಾ ಇರತಕ್ಕಂಥದ್ದು ಇದ್ದರೆ ಅದಕ್ಕೆ ಸರ್ಕಾರದಿಂದ ಸಹಾಯಧನ ಕೊಡಲಿಕ್ಕೆ ಇರತಕ್ಕಂಥದ್ದು ಇದೆ. ಹೊಟೆಲುಗಳನ್ನು ಅಲ್ಲಿ ನಿರ್ಮಾಣ ಮಾಡಿ ಪ್ರವಾಸಿಗರಿಗೆ ಉಳಿದುಕೊಳ್ಳಲಿಕ್ಕೆ ಅವಕಾಶ ಮಾಡಿದರೆ ಅವರಿಗೆ ಶೇಕಡ 20ರಷ್ಟು ಸಬ್ಸಿಡಿಯನ್ನು ಕೊಡಲಿಕ್ಕೆ ಕೂಡ ಸರ್ಕಾರದಿಂದ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಬಹುಶಃ ಈ ದೇವದುರ್ಗ ವಿಜಯನಗರ ಆಳರಸರ ಕಾಲದಲ್ಲಿ ಈ ವೇದಾರ ಎಂದು ಹೇಳತಕ್ಕಂಥ ಒಂದು ಜನ ಅವರು ಪಾಳಯಗಾರರಾಗಿ ಇರತಕ್ಕಂಥ ಸಂದರ್ಭದಲ್ಲಿ ಅವರು ಮಾಡಿರತಕ್ಕಂಥ ಕೆಲಸ, ಕಡೆಗೆ ವಿಜಯನಗರ ಆಳರಸರ ಕಾಲದಲ್ಲಿ ಅವರು ಕೆಲಸ ಮಾಡಿ ಅವರದೇ ಆಗಿರತಕ್ಕಂಥ ಒಂದು ಚಕ್ರಾಧಿಪತ್ಯವನ್ನು ದೇವದುರ್ಗವೆಂದು ಹೇಳಿ ಅವರು ರಚನೆ ಮಾಡಿರತಕ್ಕಂಥದ್ದು. ಅಲ್ಲಮಪ್ರಭು ದೇವರ ಒಂದು ಗುಹೆ ಮತ್ತು ಅಲ್ಲಿ ಒಂದು ದೇವಸ್ಥಾನ ಕೂಡ ಇದೆ. ಇವು ಇರುವುದು ಗದ್ದಾರ್ ಎಂದು ಹೇಳುತ್ತಿರತಕ್ಕಂಥ ಜಾಗದಲ್ಲಿ. ಶ್ರೀಮತಿ ಲಲಿತಾ ನಾಯಕ್‌ರವರು ಈ ಪ್ರಶ್ನೆಯನ್ನು ಕೇಳಿ ಆದಮೇಲೆ ದೇವದುರ್ಗದ ಬಗ್ಗೆ ನಾನು ಸ್ವಲ್ಪ ತಿಳಿದುಕೊಂಡೆ. ಆದ್ದರಿಂದ ಇಲ್ಲಿ ಎಲ್ಲಾ ಕೇಂದ್ರಗಳನ್ನು ಪ್ರವಾಸೋದ್ಯಮ ಇಲಾಖೆಯ ಮುಖಾಂತರವೇ ಮಾಡಬೇಕೆಂದು ಹೇಳತಕ್ಕಂಥ ಚಿಂತನೆ ನಮ್ಮಲ್ಲಿ ಇದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು600 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಆದರೆ ಈ ಹಣವನ್ನು ಪೂರ್ತಿಯಾಗಿ ನಮ್ಮ ರಾಜ್ಯಸರ್ಕಾರದ ಬಂಡವಾಳದಿಂದ ಒದಗಿಸುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿರತಕ್ಕಂಥದ್ದು ನಮಗೆ ನಿಮಗೆ ಎಲ್ಲಾ ಗೊತ್ತಿದೆ. ಮುಂದಿನ ವರ್ಷದಲ್ಲಿ ಇದಕ್ಕೆ ಸ್ವಲ್ಪ ಹಣವನ್ನು ನಾವು ಒಟ್ಟು ಮಾಡುತ್ತೇವೆ. ಹಾಗೂ ದೇವದುರ್ಗದಲ್ಲಿರತಕ್ಕಂಥ ಅಲ್ಲಮಪ್ರಭು ದೇವರ ಗುಹೆ ಮತ್ತು ಅಲ್ಲಿನ ಪ್ರೇಕ್ಷಣೀಯವಾಗಿರತಕ್ಕಂಥ ಸ್ಥಳ ಇದನ್ನು ಸ್ವಲ್ಪಮಟ್ಟಿಗೆ ಅಭಿವೃದ್ಧಿ ಪಡಿಸುವಲ್ಲಿ ಖಾಸಗಿಯವರು ಮುಂದೆ ಬಂದರೆ ಅವರಿಗೆ ಪ್ರೋತ್ಸಾಹ ಕೊಡುತ್ತೇವೆ ಮತ್ತು ನಮ್ಮ ಇಲಾಖೆಯಿಂದ ಕೂಡ 1997-98ಕ್ಕೆ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿಕ್ಕೆ ಇರತಕ್ಕಂಥದಕ್ಕೆ, ನೀವು ಪ್ರಶ್ನೆಯನ್ನು ಕೇಳಿಯಾದ ಮೇಲೆ ಇದರ ಬಗ್ಗೆ ಇಲಾಖೆಯ ಅಧಿಕಾರಿಗಳ ಜೊತೆ ಹೇಳಿದ್ದೇನೆ. ಏನೆಂದರೆ ಅದು ಶ್ರೀಮತಿ ಬಿ.ಟಿ. ಲಲಿತಾ ನಾಯಕ್‌ರವರ ಕ್ಷೇತ್ರವಾಗುತ್ತದೆ, ಅಲ್ಲಿ ನಾವು ಸ್ವಲ್ಪ ಕೆಲಸ

ಮಾಡಬೇಕು, ಅಲ್ಲಿ ಅಲ್ಲಮಪ್ರಭು ದೇವರ ಗುಹೆ ಇದೆ, ದೇವಸ್ಥಾನ ಇದೆ, ಸ್ವಲ್ಪಮಟ್ಟಿಗೆ ಅದಕ್ಕೆ ಚಿಂತನೆ ಹರಿಸಬೇಕೆಂದು ಹೇಳಿದ್ದೇನೆ. ಆದ್ದರಿಂದ ಈ ಕೆಲಸ ಮಾಡಲಿಕ್ಕೆ ಇರತಕ್ಕಂಥದ್ದಕ್ಕೆ ಪ್ರಯತ್ನ ಮಾಡುತ್ತೇವೆ.

ರಾಜ್ಯದ ಬಾಲ ಕಾರ್ಮಿಕರ ಕುರಿತು

189 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದಿಂದೀಚೆಗೆ ರಾಜ್ಯದಲ್ಲಿ ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಿದ ಪ್ರಕರಣಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಅವರ ಪುನರ್ವಸತಿಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) 1834 (ಜಿಲ್ಲಾವಾರು ವಿವರ ಲಗತ್ತಿಸಿದೆ)

ಆ) ಕೇಂದ್ರದ ನೆರವಿನಿಂದ ಕಾರ್ಯಕ್ರಮ ರೂಪಿಸಲಾಗುತ್ತಿದೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಪತ್ತೆ ಹಚ್ಚಿದ ಬಾಲ ಕಾರ್ಮಿಕರ ಸಂಖ್ಯೆ (1-4-96 ರಿಂದ 31-1-97)
1.	ಬೆಂಗಳೂರು (ನಗರ)	398
2.	ಬೆಂಗಳೂರು (ಗ್ರಾಮಾಂತರ)	270
3.	ಮೈಸೂರು	106
4.	ಕೋಲಾರ	39
5.	ಮಂಡ್ಯ	45
6.	ತುಮಕೂರು	26
7.	ಹಾಸನ	26
8.	ಚಿಕ್ಕಮಗಳೂರು	56
9.	ಮಡಿಕೇರಿ	-
10.	ಶಿವಮೊಗ್ಗ	56